# ಗ್ರೀಸ್ ಅಧ್ಯಕ್ಷರೊಂದಿಗೆ ಪ್ರಧಾನ ಮಂತ್ರಿಯ ಸಭೆ

ಆಗಸ್ಟ್ 25, 2023

ಪ್ರಧಾನಮಂತ್ರಿಯವರು 25 ಆಗಸ್ಟ್ 2023 ರಂದು ಅಥೆನ್ಸ್‌ನಲ್ಲಿ ಗ್ರೀಸ್ ಅಧ್ಯಕ್ಷರಾದ ಹೆಚ್ ಈ ಶ್ರೀ ಕಟೆರಿನಾ ಎನ್ ಸಕೆಲ್ಲರೊಪೌಲೌ ಅವರನ್ನು ಭೇಟಿಯಾದರು.

2. ಗ್ರೀಸ್‌ನಲ್ಲಿ ಕಾಡ್ಗಿಚ್ಚಿನ ದುರಂತ ಘಟನೆಗಳಲ್ಲಿ ಜೀವ ಮತ್ತು ಆಸ್ತಿಪಾಸ್ತಿ ನಷ್ಟಕ್ಕೆ ಪ್ರಧಾನಿ ಸಂತಾಪ ವ್ಯಕ್ತಪಡಿಸಿದರು.

3. ಚಂದ್ರಯಾನ ಮಿಷನ್‌ನ ಯಶಸ್ಸಿಗೆ ಅಧ್ಯಕ್ಷ ಸಕೆಲ್ಲರೊಪೌಲೌ ಪ್ರಧಾನಮಂತ್ರಿ ಅವರನ್ನು ಅಭಿನಂದಿಸಿದರು.

4. ಇಬ್ಬರು ನಾಯಕರು ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಕಾನೂನಿನ ನಿಯಮದ ಹಂಚಿಕೆಯ ಮೌಲ್ಯಗಳನ್ನು ನೆನಪಿಸಿಕೊಂಡರು. ಅವರು ಸುಸ್ಥಿರ ಅಭಿವೃದ್ಧಿ, ಮಹಿಳಾ ನೇತೃತ್ವದ ಅಭಿವೃದ್ಧಿ, ಭಾರತದ G20 ಅಧ್ಯಕ್ಷ ಸ್ಥಾನ ಮತ್ತು ಭಾರತ - ಗ್ರೀಸ್ ಸಂಬಂಧಗಳ ಗಾಢತೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿದರು.

**ಅಥೆನ್ಸ್**

**ಆಗಸ್ಟ್ 25, 2023**